# ಕೃಷಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಯ ವಿಶ್ಲೇಷಣಾತ್ಮಕ ಅಧ್ಯಯನ

ಮಲ್ಲಿಕಾರ್ಜುನ ಎಂ.ಸಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ.

DOI: https://doi.org/10.5281/zenodo.15580933

## ABSTRACT:

ಕೃಷಿ ಸಾಹಿತ್ಯ ಬರಹಗಾರರನ್ನು ಹೇಗೆ ಗುರುತಿಸಿಕೊಳ್ಳುವುದಾದರೂ ಹೇಗೆ? ಕೃಷಿಯಲ್ಲಿ ತೊಡಗಿಸಿಕೊಂಡು ತಾನು ಕಂಡುಂಡ ಸತ್ಯವನ್ನು ಬರಹದಲ್ಲಿ ರೂಪದಲ್ಲಿ ಪ್ರಕಟಿಸಿದ ಸಾಹಿತ್ಯವನ್ನು ನೆಚ್ಚಬೇಕೇ? ಅಥವಾ ಭಾವನಾತ್ಮಕವಾಗಿ ಬರೆಯುವ ಬರವಣಿಗೆಯನ್ನು ನೆಚ್ಚಬೇಕೇ? ಕೃಷಿ ವಿಜ್ಞಾನಿಗಳು ಬರೆದ ಸಲಹೆ, ಮಾರ್ಗದರ್ಶನದ ಆಧುನಿಕ ಕೃಷಿ ಮಾಹಿತಿಯನ್ನೇ? ಸಂದೇಶಗಳ ಮಾದರಿಯಲ್ಲಿರುವ ಬರವಣಿಗೆಯನ್ನೇ? ನಾವು ಎಂತಹ ಕೃಷಿ ಸಾಹಿತ್ಯವನ್ನು ನಿರೀಕ್ಷಿಸಬಹುದು. ಇಂತಹ ಜಿಜ್ಞಾಸೆ ನಮ್ಮ ಮುಂದೆ ಕಾಡುತ್ತದೆ. ಕೃಷಿಕ ಬರೆದ ಬರವಣಿಗೆಯನ್ನೇ, ಕೃಷಿಯಲ್ಲಿ ಆಸಕ್ತಿ ಹೊಂದಿ ಆಳವಾಗಿ ಅಧ್ಯಯನ ನಿರತರಾದ ಬರಹಗಾರರನ್ನೇ, ಕೃಷಿ ಅನುವಾದಗಳನ್ನೇ, ಕೃಷಿಯೇತರರು ಬರೆದ ಬರವಣಿಗೆಯನ್ನೇ, ಕೃಷಿ ವಿಜ್ಞಾನಿಗಳು ಬರೆದ ಬರವಣಿಗೆಯನ್ನೇ, ಸಾಂಸ್ಥಿಕ ಪ್ರಕಟಣೆಗಳನ್ನೇ ಇವುಗಳಲ್ಲಿ ನಾವು ಯಾವುದನ್ನು ಒಪ್ಪಬೇಕು ಎಂಬುದು ಚರ್ಚಿತ ವಿಚಾರ. ಒಟ್ಟಾರೆ ಕೃಷಿ ಸಾಹಿತ್ಯದ ನಿರ್ಮಾಣದ ನಂತರದಲ್ಲಿ ಅದರ ಪರಿಣಾಮದ ಬಗ್ಗೆ ಗಮನಿಸಬೇಕಾದ ಅಗತ್ಯವಿದೆ.

ಕೃಷಿ ಎಂಬುದೇ ಒಂದು ಜೀವನ ವಿಧಾನ. ಇದಕ್ಕೆ ಪೂರಕವಾಗಿ ಆಯಾ ಕಾಲದ ಕೃಷಿಯ ಅಗತ್ಯತೆ ಅನುಗುಣವಾಗಿ ಕೃಷಿ ಸಾಹಿತ್ಯ ಸೃಷ್ಟಿಯಾಗುತ್ತ ಬಂದಿದೆ. ಬಹುಪಾಲು ಕೃಷಿಕರು ಅಕ್ಷರಸ್ಥರಲ್ಲದ ತಳಮಟ್ಟದ ಹಾಗೂ ತಳ ಸಮುದಾಯದವರಿದ್ದಾರೆ. ಕೃಷಿಕರು ತಮ್ಮ ಬೇಸಾಯ ಚುಟವಟಿಕೆಗಳನ್ನು ಪರಿಸರ, ಹವಾಮಾನ ಹಾಗೂ ಕಾಲಾಧಾರಿತ ವಿಧಾನಗಳನ್ನು ಅನುಸರಿಸಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ಒತ್ತಡಗಳನ್ನು ನಿಭಾಯಿಸುವಂತಹ ಕೃಷಿ ಸಾಹಿತ್ಯ ಸೃಷ್ಟಿಯಾಗಬೇಕಿದೆ. ಕೃಷಿ ಸಾಹಿತ್ಯದ ನಿರ್ಮಾಣದ ಜೊತೆಗೆ ಅದರ ಪ್ರಸ್ತುತತೆ, ಸತ್ಯಾಸತ್ಯತೆ ಪ್ರತಿಯೊಂದು ವಿಚಾರಗಳು ಪರಿಶೀಲನೆ ಒಳಗಾಗಬೇಕಾಗಿದೆ. ಇದುವರೆಗೂ ಬಂದಿರುವ ಕೃಷಿ ಸಾಹಿತ್ಯಾವಲೋಕನ ಮಾಡಿದಾಗ ಕೃಷಿಕರಿಗೆ ಬೇಕಾದ ಆರ್ಥಿಕ ಲಾಭದ, ಮಾರುಕಟ್ಟೆಯ ಜ್ಞಾನಾಧಾರಿತ ಬರವಣಿಗೆಗಳು ಅಲ್ಪ ಪ್ರಮಾಣ. ಕೃಷಿ ಸಾಹಿತ್ಯ ಓದಿ ಅದನ್ನು ತಮ್ಮ ಭೂಮಿಯಲ್ಲಿ ಅಳವಡಿಸಿಕೊಂಡವರಿಗೆ ಲಾಭದ ಗ್ಯಾರಂಟಿ ಯಾವೊಬ್ಬ ಲೇಖಕ ಕೊಡಲಾರ. ಹೀಗೆ ಲೇಖಕ ಕೃಷಿ ಸಾಹಿತ್ಯ ರಚನೆಯ ಸಂದರ್ಭದಲ್ಲಿ ತನ್ನದೇ ಆದಂತಹ ಮಿತಿಗಳಿಗೆ ಸೀಮಿತವಾಗಬೇಕಾಗುತ್ತದೆ.

## KEYWORDS:

ಕೃಷಿ, ಕೃಷಿಕರು, ಇತಿಹಾಸ, ರೈತ, ಕೃಷಿ ಸಾಹಿತ್ಯ, ಪಾರಂಪರಿಕ ಜ್ಞಾನ, ಬೇಸಾಯ.

**ಪ್ರವೇಶ:**

ಕೃಷಿ ಎಂಬುದು ಬಹಳ ವೇಗವಾಗಿ ಪ್ರಾದೇಶಿಕ ಭಿನ್ನತೆಯಿಂದಾಗಿ, ಪರಿಸರೀಯವಾಗಿ ಬದಲಾಗುತ್ತ, ಹೊಸ ಬಗೆಯ, ಹೊಸ ವಿಧಾನಗಳ ಸಮಯಾಧಾರಿತ ನೆಲೆಯಲ್ಲಿ ಭಿನ್ನ ಭಿನ್ನ ಸ್ವರೂಪವನ್ನು ಪಡೆಯುತ್ತಿರುತ್ತದೆ. ಹೀಗಾಗಿ ಕೃಷಿ ಕುರಿತು ಬರೆಯುತ್ತಿರುವ ಲೇಖಕರಿಗೆ ಪರಿಣಾಮದ ಬಗ್ಗೆ ಎಂದಿಗಿಂತಲೂ ಇಂದು ಸತ್ಯಾಸತ್ಯತೆ ಬಗೆಗೆ ಜಾಗೃತರಾಗಿರುವುದು ಅಗತ್ಯ.

ಕೃಷಿ ಸಾಹಿತಿ(ಲೇಖಕ)/ಕೃಷಿ ವಿಜ್ಞಾನ ಸಾಹಿತಿ ಅಥವಾ ಕೃಷಿ ಪತ್ರಿಕಾ ವರದಿಗಾರರಾಗಲಿ ರೈತರ ದೃಷ್ಟಿಕೋನದಿಂದ ಬರೆಯುವಂತಾಗಬೇಕು. ಕೃಷಿ ಸಾಹಿತ್ಯವನ್ನು ಒಬ್ಬ ರೈತನಂತೆ ಚಿಂತಿಸಿ ಬರೆಯಬೇಕಾದ ಅವಶ್ಯಕತೆಯಿದೆ. ಇಂತಹ ಬರಹಗಳನ್ನು ಓದಿ ರೈತರು ಸರಳವಾಗಿ ಅರ್ಥೈಸಿಕೊಳ್ಳುವಂತಿರಬೇಕು. ಕೃಷಿಕರಿಗೆ ಇಂದು ಪ್ರಾತ್ಯಕ್ಷಿಕೆ ಆಧಾರದ, ವಿಶ್ವಾಸಾರ್ಹವಾದ ಶಿಕ್ಷಣ ಮತ್ತು ತಂತ್ರಜ್ಞಾನದ ಅರಿವಿನ ಅಗತ್ಯವಿದೆ. ಮಾರುಕಟ್ಟೆ ಆಧಾರಿತ ಸಾಹಿತ್ಯ ಸೃಷ್ಟಿ, ಸಮಯಾಧಾರಿತ ಕೃಷಿ ಸಲಹೆಗಳು, ಮಾರ್ಗದರ್ಶನಗಳು ಹಾಗೂ ಅಂತಸ್ಸತ್ವವುಳ್ಳ ಬರಹಗಳು ಇನ್ನೂ ಹೆಚ್ಚು ಬರಬೇಕಾಗಿದೆ.

**ಕೃಷಿ ವಿಜ್ಞಾನ ಸಾಹಿತ್ಯದ ವೈವಿಧ್ಯತೆ:**

ಆಧುನಿಕ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು 19ನೇ ಶತಮಾನ ಆದಿಯಿಂದ ಆರಂಭವಾಯಿತೆಂಬುದನ್ನು ಗುರುತಿಸಲಾಗಿದೆ. ಕೃಷಿ ಹುಟ್ಟು ಬೆಳವಣಿಗೆಗೆ ಬಹಳ ಹಿಂದಿನ ಚರಿತ್ರೆ ಇದ್ದರೂ, ಕೃಷಿ ವಿಜ್ಞಾನ ಸಾಹಿತ್ಯ ಚರಿತ್ರೆಗೆ ಸುದೀರ್ಘವಾದ ಚರಿತ್ರೆ ಇಲ್ಲ. 1915ರಲ್ಲಿ ಮೈಸೂರು ವ್ಯವಸಾಯ ಇಲಾಖೆಯು ಕೃಷಿಕರಿಗಾಗಿ ಮೈಸೂರು ವ್ಯವಸಾಯದ ಕ್ಯಾಲೆಂಡರ್/ಪಂಚಾಂಗವೆಂಬ ವಾರ್ಷಿಕ ಪತ್ರಿಕೆಯನ್ನು ಪ್ರಕಟಿಸಿದೆ. ಇಲ್ಲಿಂದ ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯಕ್ಕೆ ಇಂಬು ದೊರೆಯಿತು. ಈ ಹಿನ್ನೆಲೆಯಲ್ಲಿ ಸ್ಥೂಲವಾಗಿ ಕೃಷಿ ಸಾಹಿತ್ಯದ ಕಾಲಘಟ್ಟವನ್ನು ಅಧ್ಯಯನದ ದೃಷ್ಟಿಯಿಂದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂದು ಎರಡು ಭಾಗಗಳಾಗಿ ವಿಭಜಿಸಲಾಗಿದೆ. ಇವುಗಳಲ್ಲಿ ಭಾವಾನಾತ್ಮಕ/ಅನುಭವದ ನೆಲೆ ಮತ್ತು ವೈಜ್ಞಾನಿಕ ದೃಷ್ಟಿಕೋನದ/ಶುದ್ಧ ವಿಜ್ಞಾನ ಎಂಬುದಾಗಿ ಗುರುತಿಸಲಾಗಿದೆ.

**ಅನುಭಾವಿ ಹಾಗೂ ಭಾವಾನಾತ್ಮಕ ನೆಲೆಯ ಬರವಣಿಗೆಗಳು:**

ಅನುಭಾವಾತ್ಮಕ ಬರವಣಿಗೆಗಳಲ್ಲಿ ಸ್ವತಃ ಕೃಷಿಕರು ಹಾಗೂ ಜನಪದರು ಕಟ್ಟಿ ಹಾಡಿದ ಹಾಡುಗಳು ಇಂದಿಗೂ ಕೃಷಿ ಸಾಹಿತ್ಯದ ಮೂಲ ದ್ರವ್ಯಗಳಾಗಿವೆ. ಜನಪದರು ತಮ್ಮ ಕೃಷಿ ಬದುಕನ್ನು ಕ್ರಿಯಾಶೀಲವಾಗಿಸಿ ಅದರಿಂದ ದೊರೆತ ಅನುಭವಗಳನ್ನು

ನಾಣ್ಣುಡಿಗಳು, ಗಾದೆಗಳು, ಒಗಟುಗಳು, ಜನಪದ ಗೀತೆಗಳು ಹಾಗೂ ಇತರ ರೂಪಗಳಲ್ಲಿ ಅಭಿವ್ಯಕ್ತಿಗೊಳಿಸಿರುವ ಪ್ರಕಟಣೆಗಳು ನಮಗೆ ಲಭ್ಯ. ಅಂತೆಯೇ ಕನ್ನಡದ ಶಾಸನಗಳಲ್ಲಿ, ಕಾವ್ಯಗಳಲ್ಲಿ, ಕಥನಗಳಲ್ಲಿ ಕೃಷಿಯ ಬಗ್ಗೆ ಉಲ್ಲೇಖಗಳಿವೆ.

"ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ, ಎಳ್ಳು ಜೀರಿಗೆ ಬೆಳೆವಂಥ! ಎಳ್ಳು ಜೀರಿಗೆ ಬೆಳೆವಂಥ ಭೂಮ್ತಾಯ್ನ, ಎದ್ದೊಂದು ಗಳಿಗೆ ನೆನೆದೇನೋ! "ಶರಣು ಶರಣಮ್ಮ ಭೂಮಿತಾಯಿಯೇ ನಿನಗೆ, ನೂರಾರು ಸಲ ನಮ್ಮ ಶರಣಾ! ಮೂಡಲ ನಾಡಿನ ಹಕ್ಕಿಗಳು ನಾವು ಹೊರಟೇವು" ನಮ್ಮೂರ ಕಡೆಗೆ ನಮ್ಮ ಹರಣಾ! ಹೀಗೆ ನೂರಾರು ಉದಾಹರಣೆಗಳನ್ನು ಉಲ್ಲೇಖಿಸಬಹುದು. ಈ ಜನಪದರ ಮುಖ್ಯ ಕಸುಬು ಬೇಸಾಯ. ಈ ಜನಪದರ ಬೇಸಾಯದ ತಂತ್ರಜ್ಞಾನ, ನೀರಾವರಿ ತಂತ್ರಜ್ಞಾನ, ಪರಿಸರ ಜ್ಞಾನ, ಮಣ್ಣು ವಿಜ್ಞಾನ, ಸಸ್ಯ ವಿಜ್ಞಾನ ಇನ್ನೂ ಹಲ ಬಗೆಯ ಜ್ಞಾನ ಅವನೊಳಗೆ ಅಂತರ್ಗತವಾಗಿದ್ದು, ಅಭಿವ್ಯಕ್ತಿಗೊಂಡಿವೆ. ಇಂತಹ ಜ್ಞಾನದ ಭಾಗವಾಗಿ ಜಾನಪದ ನುಡಿಗಳಲ್ಲಿ ಕಂಡಿದ್ದೇವೆ.

ಕರ್ನಾಟಕದ ಶಾಸನಗಳಲ್ಲಿ ಕೃಷಿ ವಿಚಾರಗಳನ್ನು ಕುರಿತಂತೆ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ವ್ಯವಸಾಯ ಪದ್ಧತಿ ಕುರಿತಂತೆ ಶಾಸನಗಳನ್ನು (ಕ್ರಿ. ಶ. 450ರಿಂದ 1150ವರೆಗೆ) ಅಧ್ಯಯನ ಮಾಡಿರುವ ಡಾ. ಎಂ. ಚಿದಾನಂದಮೂರ್ತಿಯವರು ಉಲ್ಲೇಖಿಸಿರುವಂತೆ "ಇಂದಿನಂತೆಯೇ ಪ್ರಾಚೀನ ಕರ್ನಾಟಕದಲ್ಲಿಯೂ ವ್ಯವಸಾಯವೇ ಅತಿ ಪ್ರಮುಖ ಜೀವನೋಪಾಯವಾಗಿತ್ತು. ವ್ಯವಸಾಯದ ಜೊತೆಗೆ ಇನ್ನೆರಡು ಉದ್ಯಮಗಳನ್ನು ಹೆಸರಿಸಬಹುದು. ಒಂದು ಕುರಿಸಾಕಣೆ ಮತ್ತೊಂದು ಪಶುಪಾಲನೆ. ರೈತರನ್ನು ಒಂದು ಭೂದೇವಿಯ ಮಕ್ಕಳು, ಭೂಮಿ ಪುತ್ರರು, ಒಕ್ಕಲು ಮಕ್ಕಳೆಂದು ಶಾನಗಳು ಕರೆದಿವೆ. "(ಪುಟ-362). ಕವಿರಾಜಮಾರ್ಗದ (ಕ್ರಿ. ಶ. 850) ಕರ್ತೃವಾದ ಶ್ರೀವಿಜಯನು ಕನ್ನಡ ನಾಡಿನ ಭೌಗೋಳಿಕ ವಿಸ್ತಾರದ ಜೊತೆಗೆ "ಪರದರ್ಗ ಪಾರ್ವರ್ಗಂಯ್ಯರಸರ್ಗ ಕುಡಿಯರಪ್ಪ ನಾಲ್ವರ್ಗಗಳ್ ಸ್ಥಿರ ಗೋಪಾಧ್ಯಾಯ ಕ್ಷಾಮಪರಿಪಾಲ್ಯ ಕ್ಷೇತ್ರ ಕರ್ಷಣಂಗಳ್ ಕ್ರಿಯೆಗಳ್(1-ಪದ್ಯ 65)" ಈ ಉಲ್ಲೇಖವು ಸಹ ಯಾರ ಯಾರ ಕೆಲಸ ಏನು ಎಂಬುದನ್ನು ಉಲ್ಲೇಖಿಸುತ್ತದೆ. ಹರದರ (ವರ್ತಕರ) ಕೆಲಸ ಗೋಪಾಲನೆ, ಪಾರ್ವರ(ಬ್ರಾಹ್ಮಣರ)ಕೆಲಸ ಅಧ್ಯಯನ, ಅರಸರ ಕೆಲಸ ಭೂಮಿ ಪರಿಪಾಲನೆ ಮತ್ತು ಕುಡಿಯರ(ಒಕ್ಕಲಿಗರ) ಕೆಲಸ ನೆಲವನ್ನು ಉಳುವಿಕೆ ಎನ್ನುವುದು ಇದರ ಸಾರಾಂಶ. ಶಿವಕೋಟ್ಯಾಚಾರ್ಯರು ತಮ್ಮ ವಡ್ಡಾರಾಧನೆ ಕೃತಿಯಲ್ಲಿ ಒಕ್ಕಲಿಗರು, "ಒರ್ವನೊಕ್ಕಲಿಗನೊಂದು ಪೇರುಮಣ್ಣು ತಂದು ಶ್ರೀ ಪರ್ವತದ ಮೇಗೊಟ್ಟಿದೊಡೆ" ಎಂಬಲ್ಲಿ ಆರಂಭ ಮುಂತಾದ ಉಲ್ಲೇಖಗಳು ವ್ಯಕ್ತವಾಗಿದೆ. ಅಂತೆಯೇ ಕನ್ನಡ ಸಾಹಿತ್ಯದ ಆದಿ ಕವಿ ಪಂಪ (ಕ್ರಿ. ಶ. 950) ಮಹಾಭಾರತದ ಕಥೆಯ ಹಂದರದೊಳಗೆ

ಉಚಿತ ಎನ್ನುವಷ್ಟರ ಮಟ್ಟಿ ಬನವಾಸಿ ದೇಶವನ್ನು ಮೈದುಂಬಿ ವರ್ಣಿಸಿದ್ದಾನೆ. ನಾಗಚಂದ್ರನ ಪಂಪ ರಾಮಾಯಣದಲ್ಲಿ(ಕ್ರಿ. ಶ. 1100) ದಶರಥ ಮಹಾರಾಜನ ವರ್ಣಿಸುವಾಗ ತನ್ನ ಕಾಲದ ಬನವನ್ನು, ಕೆಯ್ವೊಲಗಳ ಧಾನ್ಯಕ್ಕೆ ಎರಗಿರುವ ಗಿಳಿಗಳ ಹಿಂಡನ್ನೂ, ಹಿಂಡನ್ನು ಓಡಿಸಲು ಅಬಲೆಯರನ್ನು ಕುರಿತ ವರ್ಣನೆ ಬರುತ್ತದೆ. ನಯಸೇನ ಧರ್ಮಾಮೃತ(ಕ್ರಿ. ಶ. 1112)ದಲ್ಲಿ ಹಲವು ವ್ಯವಸಾಯ ವಿಷಯವನ್ನು ಉಲ್ಲೇಖಿಸುತ್ತಾನೆ.

12ನೇ ಶತಮಾನದಲ್ಲಿ ವೃತ್ತಿಗೌರವಕ್ಕೆ ಹೆಚ್ಚಿನ ಮಹತ್ವವಿತ್ತು. ಅಂತೆಯೇ ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಕಾಯಕ ತತ್ವ ಇಂದಿಗೂ ಅನ್ವಯಿಸುತ್ತದೆ. ವಚನಗಳಲ್ಲಿನ ಅನುಭಾವದ ನುಡಿಗಳು ಕೃಷಿ ಮೂಲದಿಂದಲೇ ಹುಟ್ಟಿ ಬಂದಿವೆ.

"ಎನ್ನ ಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗ ತಂದೆ, ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವ" ಕಸ ತೆಗೆದರೆ ಬೆಳೆಯು ಸುಳಿದೆಗೆದು ಬೆಳೆವುದನ್ನು ತಿಳಿಸಿದ್ದಾರೆ. ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾತ್ತೆನ್ನ ಭಕ್ತಿ(ವ. 664), ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದೊಡೆ ರುಚಿಯುಂಟೆ(ವ. 516), ಜೋಳವಾಳಿಯಾನಲ್ಲ ವೇಳೆವಾಳಿಯವ ನಾನಯ್ಯ(ವ. 698), ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು, ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು ಸಲಗೆ ತುಂಬಿತ್ತು ಕೂಡಲ ಸಂಗಮದೇವಯ್ಯ(ವ. 1392)

ಹರಿಹರ ತನ್ನ ಕಾವ್ಯಗಳಾದ ಗಿರಿಜಾಕಲ್ಯಾಣ, ಇಳೆಯಾಂಡ ಗುಡಿಮಾರರ ರಗಳೆ ಕೃಷಿ ಮತ್ತು ಕೃಷಿಕನ ಬಗ್ಗೆ ಉಲ್ಲೇಖಗಳು ಸಾಕಷ್ಟು ಬರುತ್ತದೆ. ಸಮಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ... " ಕವಿ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹೊಲಗದ್ದೆ, ತೆಂಗು ಕೌಂಗು, ಬಾಳೆ, ಮಾವು, ಬೇವು ಹುಣಿಸೆ ಮುಂತಾದ ಗಿಡಮರಗಳ ಉಲ್ಲೇಖವಿದೆ. ನಯಸೇನ ಜೀವ ಸಂಭೋಧನಂ ಕೃತಿಯಲ್ಲಿ, ಜನ್ನ ಯಶೋಧರ ಚರಿತೆಯಲ್ಲಿ, ಆಂಡಯ್ಯ ಕಬ್ಬಿಗರ ಕಾವಂ ಕೃತಿಯಲ್ಲಿ, ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವದಲ್ಲಿ, ಕುಮಾರವ್ಯಾಸನ ಮಹಾಭಾರತದ ಕಥೆಯಲ್ಲಿ ಹಾಗೂ ಇನ್ನೂ ಮೊದಲಾದವರ ಕಾವ್ಯ ಕಥನಗಳಲ್ಲಿ ಕೃಷಿ ಮತ್ತು ಕೃಷಿಕರ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಸಂಚಿಹೊನ್ನಮ್ಮಳ ಹದಿಬದಿಯ ಧರ್ಮ ಕಾವ್ಯದಲ್ಲಿ, ಅದರಂತೆ ಕವಿ ಸರ್ವಜ್ಞನ ತ್ರಿಪದಿಗಳಲ್ಲಿ ಕಾಣುತ್ತೇವೆ. "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು! ಮೇಟಿಯಿಂ ರಾಟೆ ನಡೆದುದಲ್ಲದೆ! ದೇಶ! ದಾಂಟದೇ ಕೆಡಗು ಸರ್ವಜ್ಞ." ಎಂಬ ರಚನೆ ಇಲ್ಲಿ ಉಲ್ಲೇಖಾರ್ಹ.

ತಮಿಳಿನ ಪ್ರಾಚೀನ ಕವಿ ತಿರುವಳ್ಳುವರ್ 'ಕೃಷಿ' ಕುರಿತು "ಕೃಷಿ ಅತ್ಯಂತ

ಯೋಗ್ಯವಾದ ಕರಕುಶಲ ಕಲೆ. ಪ್ರಯಾಸಕರವಾದರೂ ಭೂಮಿಯ ಮೇಲಣ ಸಮಸ್ತ ಜೀವಿಗಳಿಗೆ ಆಧಾರ. ರೈತರು ವಿಶ್ವದ ಜೀವಾಳ. ಅವರು ಮಾತ್ರ ಸ್ವತಂತ್ರ ನಾಗರಿಕರು. ಇತರರೆಲ್ಲರೂ ಅವರ ಮೇಲೆ ಅವಲಂಬಿಗಳು. ರೈತರ ಕೈಗಳ ಬಲ ಕುಂದಿದರೆ ತಪಸ್ವಿಗಳೂ ತಮ್ಮ ಧ್ಯಾನದಲ್ಲಿ ವಿಫಲಗೊಳ್ಳುತ್ತಾರೆ. ಮನುಷ್ಯ ಸ್ವತಃ ತನ್ನ ಭೂಮಿಯೆಡೆಗೆ ಗಮನ ಕೊಡದಿದ್ದರೆ, ಅದು ಕುಪಿತ ಪತ್ನಿಯಂತೆ ವರ್ತಿಸುತ್ತದೆ ಮತ್ತು ಆತನಿಗೆ ಖುಷಿ ನೀಡುವುದಿಲ್ಲ. ಉಳುಮೆಗಿಂತ ಗೊಬ್ಬರ ನೀಡುವುದು ಮುಖ್ಯ. ನಂತರ ಕಳೆ ಕೀಳುವುದು. ನೀರಿನ ನಿರ್ವಹಣೆಗಿಂತ ಅಧಿಕ ಮಹತ್ವ ಸಸ್ಯ ಸಂರಕ್ಷಣೆಯದು'' ಎಂದಿದ್ದಾರೆ.

ದಾಸರ ಕೀರ್ತನೆಗಳಲ್ಲಿ ಕೃಷಿ ಕುರಿತಾದ ಚಿಂತನೆಗಳು ಅಭಿವ್ಯಕ್ತಗೊಂಡಿವೆ. ಪುರಂದರ ದಾಸರ ಕೀರ್ತನೆಯಲ್ಲಿ ``ಅನ್ನ ಉದಕ ಊಟವೀಯೋದು ಮಣ್ಣು! ಬಣ್ಣ ಬಂಗಾರ ಬೊಕ್ಕಸವೆಲ್ಲ ಮಣ್ಣು!''.. ಹೀಗೆ ಕೃಷಿ ಕುರಿತಾದ ವಿವರ ದೊರಯುತ್ತದೆ. ಕನಕದಾಸರ ರಾಮಧಾನ್ಯ ಚರಿತ್ರೆಯ ನವಧಾನ್ಯಗಳಲ್ಲಿ ರಾಗಿ ನಾಯಕನಾದರೆ ಅಕ್ಕಿ ಖಳನಾಯಕನಾಗಿದೆ, ಇಲ್ಲಿ ಕಥನದ ಮೂಲಕ ಕೃಷಿಯ ಪ್ರಸ್ತಾಪ ವ್ಯಕ್ತವಾಗುತ್ತದೆ.

**ಸ್ವಾತಂತ್ರ್ಯಪೂರ್ವ ಕಾಲ ಘಟ್ಟದ ಬರವಣಿಗೆಗಳು:**

ಈ ಕಾಲಘಟ್ಟದಲ್ಲಿ ಬಹುತೇಕ ಸಾಹಿತ್ಯ ಸೃಷ್ಟಿ ಆಧ್ಯಾತ್ಮಿಕ ನೆಲೆ, ಅನುಭಾವಿಕ ನೆಲೆ ಹಾಗೂ ಸ್ವಾನುಭವದ ನೆಲೆಯಲ್ಲಿ ರಚನೆಯಾದವು. ಇಲ್ಲಿ ಉಪದೇಶ, ಬೋಧಪ್ರದವಾದ ವ್ಯವಸಾಯ ಕ್ರಮಗಳನ್ನು ಅನುಸರಿಸುವ ವಿಧಾನಗಳ ಕುರಿತು ರಚನೆಗೊಂಡಿವೆ. ಉಪದೇಶ, ಬೋಧಪ್ರದವಾದ ವ್ಯವಸಾಯ ಕ್ರಮಗಳನ್ನು ಅನುಸರಿಸುವ ವಿಧಾನಗಳ ಕುರಿತು ರಚನೆಗೊಂಡು ಪಾಶ್ಚಿಮಾತ್ಯ ವಿಜ್ಞಾನ ಸಂಶೋಧನೆ, ರಾಸಾಯನ ಶಾಸ್ತ್ರದ ಸಂಶೋಧನೆಗಳು ಕೃಷಿ ವಿಧಾನಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿ, ಕೃಷಿ ವಿಜ್ಞಾನ ಸಾಹಿತ್ಯ ರಚನೆಗೆ ಪ್ರೇರಕವಾಗಿರುವುದನ್ನು ಈ ಕಾಲಘಟ್ಟದಲ್ಲಿ ಗುರುತಿಸಬಹುದು. ಇನ್ನೂ ಕೆಲವು ಸಂಶೋಧನಾ ನೆಲೆಯಲ್ಲಿ ಕೃಷಿ ವಿಜ್ಞಾನಿಗಳು ರಚಿಸಿದಂತಹ ಸಾಹಿತ್ಯದ ಸೃಷ್ಟಿಯಾಗಿವೆ. ಇಲ್ಲಿನ ಲೇಖಕರು ಧರ್ಮಗುರುಗಳು, ಶಾಲಾ ಮಾಸ್ತರರು, ನಾಟಿ ವೈದ್ಯರು, ಶಾಸ್ತ್ರ ಗ್ರಂಥಗಳನ್ನು ಓದಿಕೊಂಡ ಪಂಡಿತರು ಹಾಗೂ ಕೆಲವರು ಕೃಷಿ ಬಗೆಗಿನ ಆಸಕ್ತಿಯುಳ್ಳವರು ಕೃಷಿ ವಿಜ್ಞಾನ ಸಾಹಿತ್ಯ ರಚನೆಗೆ ತೊಡಗಿಸಿಕೊಂಡರು. ಆರಂಭದ ದಿನಗಳಲ್ಲಿ ಖಾಸಗಿ ಪ್ರಕಾಶನ ಸಂಸ್ಥೆಗಳು ಪ್ರಕಟಿಸಿದ ಗ್ರಂಥಗಳು ಹಾಗೂ ಸರ್ಕಾರ ಕೃಷಿ ಪ್ರಸಾರ ಮಾಡುವ ನಿಟ್ಟಿನಲ್ಲಿ ಮಾಡಿದ ಪ್ರಕಟಣೆಗಳು ಗಮನಾರ್ಹ. ಅಂತಹ ಪ್ರಾತಿನಿಧಿಕ ಕೃತಿಗಳ ಅವಲೋಕನ ಇಲ್ಲಿದೆ.

1879ರಲ್ಲಿ ಶ್ರೀ ನಾಗಭೂಷಣ ಘನಮಠ ಶಿವಯೋಗಿಗಳು ರಚಿಸಿದ 'ಕೃಷಿ

ಜ್ಞಾನ ಪ್ರದೀಪಿಕೆ' ಕೃಷಿವಿಜ್ಞಾನ ಸಾಹಿತ್ಯದ ಮೊಟ್ಟಮೊದಲ ಗ್ರಂಥ ಇದು ಅನುಭಾವ ಆಧಾರಿತ ಗ್ರಂಥವಾಗಿದ್ದು, ಅನುಸರಿಸಬೇಕಾದ ಕೃಷಿ ಪದ್ಧತಿ ಹಾಗೂ ವಿಧಾನಗಳನ್ನು ವಿವರಿಸುತ್ತದೆ.

ಮೈಸೂರು ಸರ್ಕಾರ 1879ರಲ್ಲಿ ಪ್ರಕಟಿಸಿದ ಎಫ್. ಇ. ಹರ್ಮನ್ ಮತ್ತು ರಾಮಸ್ವಾಮಿ ಶಾಸ್ತ್ರಿ ವಿರಚಿತ 'ವ್ಯವಸಾಯ ಕ್ರಮ ಬೋಧಿನಿ' ಕೃಷಿ ವಿಜ್ಞಾನ ಬೋಧನಾ ಕ್ರಮವನ್ನು ಸಾಮಾನ್ಯ ರೈತರಿಗೆ ತಿಳಿಸಿಕೊಡುವ ಪ್ರಾಯೋಗಿಕ ಕೃತಿ. 1895ರಲ್ಲಿ ಪ್ರಕಟಿಸಿದ ನರಸಿಂಹ ಅವರ ಸಂಗ್ರಹ 'ಪಶುವೈದ್ಯ', ಬೆಂಗಳೂರಿನ ಮೈಸೂರು ಬುಕ್ ಡಿಪೋ 1898ರಲ್ಲಿ ಪ್ರಕಟಿಸಿದ ಅಯ್ಯಂಗಾರ್ ಕೊರವಂಡರ 'ಜಲರತ್ನಾಕರ' ಮತ್ತು ರಾಮಸ್ವಾಮಿ ಅಯ್ಯಂಗಾರ್‌ರವರು 'ವ್ಯವಸಾಯ ಚಂದ್ರಿಕೆ' ಕೃತಿ ಹಾಗೂ ಮೈಸೂರು ಶಿಕ್ಷಣ ಇಲಾಖೆಯವರು ಪ್ರಕಟಿಸಿರುವ 1900ರಲ್ಲಿ ಕೆ. ಶೇಷಾದ್ರಿ ಅಯ್ಯಂಗಾರ್‌ರ 'ವ್ಯವಸಾಯ ಬೋಧಿನಿ' ಬೋಧ ಪ್ರದ ಹಾಗೂ ಮಾರ್ಗದರ್ಶಕ ಕೃತಿಗಳಾಗಿವೆ.

1902ರಲ್ಲಿ ವ್ಯವಸಾಯ ಇಲಾಖೆ ಪ್ರಕಟಿಸಿದ 'ಕಾಫಿ ತೋಟದಲ್ಲಿ ತರಗು ಹೊದಿಕೆ', ಮದ್ರಾಸಿನ ಸರ್ಕಾರಿ ಮುದ್ರಣಾಲಯ 1903ರಲ್ಲಿ ಪ್ರಕಟಿಸಿದ ವಾಕರ್, ಜಿ. ಕೆ. ಅವರ ಭಾರತ ದೇಶದ ವಿಶೇಷ ಅಪಾಯಕಾರಿ ಜಾನುವಾರು ರೋಗಗಳು, 1905ರ ಸಿ. ಕೆ ಸುಬ್ಬರಾವ್‌ರ 'ಕೃಷಿ ಶಾಸ್ತ್ರ, ಧಾರವಾಡದ ವಿದ್ಯಾವರ್ಧಕ ಸಂಘದ (1906) ರಾಮಚಂದ್ರ ಮಾಧ್ವ ಮಹಿಷಿ ಅವರ 'ಕೃಷಿ ಕರ್ಮಶಾಸ್ತ್ರ', 1908ರಲ್ಲಿ ಕೊರವಂಡ ಅಪ್ಪಯ್ಯನವರ 'ವ್ಯವಸಾಯಧರ್ಮ ಬೋಧಿನಿ', ಬೆಂಗಳೂರಿನಲ್ಲಿ ಪ್ರಕಟಗೊಂಡವು. 1909ರಲ್ಲಿ ಹನುಮಂತಯ್ಯಗೌಡ ಅವರ 'ವ್ಯವಸಾಯ ಕ್ರಮ ಬೋಧಿನಿ', 1909ರಲ್ಲಿ ಎಸ್. ಕೆ. ಒಡೆಯರ್‌ಅವರ 'ಗೊಬ್ಬರ', 1909ರಲ್ಲಿ ಅನಾಮಿಕ, 'ಗೋಮಯ-ಅದರ ಗುಣದೋಷಗಳು' ಕೃತಿಗಳು ಪ್ರಾಯೋಗಿಕ ನೆಲೆಯಲ್ಲಿ ಅನ್ವಯಿಕ ಕೃಷಿ ವಿಜ್ಞಾನ ಸಾಹಿತ್ಯ ಸೃಷ್ಟಿಗೆ ಪೂರಕವಾಗಿವೆ.

ಸಿ. ಹನುಮಂತಗೌಡರ 'ದಕ್ಷಿಣ ಹಿಂದೂ ದೇಶದ ವ್ಯವಸಾಯ ಪದ್ಧತಿ'1911, 'ವ್ಯವಸಾಯ ಪದ್ಧತಿ-ಭಾಗ-1', 1912 ರ ಜೆ. ಬಿ. ನೈಟ್‌ರ 'ಬೇಸಾಯದ ಪಾಠಗಳು', 1912ರ ಎಸ್. ಕೆ. ವೆಂಕಟನರಸಿಂಹಯ್ಯರ 'ತೆಂಗಿನ ಫಸಲು ಸಾಗುವಳಿ', 1916 ರ ಆರ್. ಶೆಟ್ಟಣ್ಣರ 'ಕೃಷಿ ಸಂಜೀವಿನಿ', 1917ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಾಯಣಪ್ಪ ಮತ್ತು ಮೈಸೂರಿನ ನಂಗಪುರಂ ವೆಂಕಟೇಶ ಅಯ್ಯಂಗಾರ್‌ರವರು ವಿಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಪ್ರಚಾರಗೊಳಿಸುವ ಉದ್ದೇಶಕ್ಕಾಗಿ ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯನ್ನು ರಚಿಸಿ, ಆ ಮೂಲಕ ವಿಜ್ಞಾನ ಮಾಸಪತ್ರಿಕೆಯನ್ನು ಹೊರತಂದರು. 1917ರ ಬಿ. ಎನ್. ನಂಜಪ್ಪ, ಎಂ. ಆರ್. ವೆಂಕಟಾಚಲಂ ಸೆಟ್ಟಿ

ಅವರ ಗೋವೈದ್ಯ ಸಾರ ಸಂಗ್ರಹ, 1918ರ ಕೆ. ನರಸಿಂಗ ಅಯ್ಯಂಗಾರ್‌ರವರ 'ಪಶುವೈದ್ಯ', 1919ರ ಕೆ. ಭೀಮರಾಯರ 'ವ್ಯವಸಾಯ ಶಾಸ್ತ್ರದ ಕೆಲವು ಮುಖ್ಯತತ್ವಗಳು', 1925ರ ಖಾದ್ರಿ ಗುಂಡೂರಾವ್ ಅವರ 'ಗೋಮಾತೆ', 1927ರ ಕೆ. ನರಸಿಂಗ ಅಯ್ಯಂಗಾರ್‌ರವರ 'ಸರಳ ವ್ಯವಸಾಯ ಪಾಠ', 1929 ಶಿವಾಚಾರ್ಯ ನೀಲಕಂಠ ಲಿಂಗ, ಎಸ್. ಬಿ. ಶರ್ಮರ 'ಭೂಲೋಕದ ಕಾಮಧೇನು', 1930ರ ಹರಿಪುರುಷೋತ್ತಮ ಪರಾಂಜಪೆ 'ಮತ್ತಿತರ ಹಣ್ಣುಹಂಪಲಗಳ ಬಾಗಾಯತು', 1932 ರಾಘವೇಂದ್ರ ಭೀಮರಾವ್ ಮತ್ತು ಮುತಾಲಿಕ್ ದೇಸಾಯಿ ಅವರ 'ಹೊಲದಲ್ಲಿ ಒಡ್ಡು ಒಟ್ಟಿಲುಗಳು', 1936ರಲ್ಲಿ ಎಫ್‌ಜಿ ಹಳಕಟ್ಟಿಯವರ 'ಕೃಷಿ ಜ್ಞಾನ ಪ್ರದೀಪಿಕೆ', 1937ರ ಹನುಮಪ್ಪ ರಾಮಪ್ಪ ಕಳವಾಡರ 'ಒಕ್ಕಲಿಗರ ಕೈಪಿಡಿ', 1938ರ ಅಮರಗೋಳಮಠ ಮತ್ತು ಬಿ. ವಿ. ಹಿರೇಮಠರ 'ಮಾದರಿಯ ತೋಟ ಅರ್ಥಾತ್ ಕಾಯಿಪಲ್ಲೆ ಸಾಗುವಳಿ', 1943 ಜೋಸೆಫ್ ಕಾರ್ನಿಯಾಸ್ ಮತ್ತಿರರ 'ಮಾನವ ಆರೋಗ್ಯ, ಅಕ್ಕಿಯಲ್ಲಿನ ಜೀವ ಸತ್ವಗಳು ಹಾಗೂ ಅಕ್ಕಿಯ ಪ್ರಾಮುಖ್ಯತೆ', 1944ರ ಎಂ. ಕೃಷ್ಣಶಾಸ್ತ್ರಿಯವರ 'ಪಶುಪಾಲನೆ', 1945ರ ಪೈಲೂರು ಲಕ್ಷ್ಮಿನಾರಾಯಣರ ಮತ್ತು ಚೊಕ್ಕಾಡಿಯವರ 'ಜೇನಿನ ವ್ಯವಸಾಯ', 1946ರಲ್ಲಿ ಡಬ್ಲ್ಯು ವಿಲ್ಸನ್ ಮತ್ತು ಎಂ. ವಿ. ಸೀತಾರಾಮಯ್ಯರ 'ದಕ್ಷಿಣ ಭಾರತದಲ್ಲಿ ಕಾಫಿ ಸಂಶೋಧನೆ–ಒಂದು ಟಿಪ್ಪಣಿ, 1946 ರ ದಾಮೋದರ ಬಾಳಿಗರ 'ನೂತನ ಲಘುವಿಜ್ಞಾನ ಪಶುಸಂಗೋಪನಾ ಸಾಹಿತ್ಯ ಭಾಗ–1', 1947ರಲ್ಲಿ ಆರ್. ಜಿ. ಶಾಮರಾವ್‌ರ 'ನಮ್ಮ ವ್ಯವಸಾಯ', 1947ರಲ್ಲಿ ಕೊಲ್ಲನಗೌಡ ಪಾಟೀಲರ 'ತುಂಡು ಹೊಲಗಳ ಸಂಯೋಜನೆ', 1947ರಲ್ಲಿ ವೀ. ಚ. ಹಿತ್ತಲಮನಿಯವರ 'ಗೊಬ್ಬರ' ಕೃತಿಗಳನ್ನು ಅವಲೋಕಿಸಬಹುದಾಗಿದೆ. ಈ ಎಲ್ಲಾ ಕೃತಿಗಳು ಒಂದು ರೀತಿಯಲ್ಲಿ ಪ್ರಾಯೋಗಿಕನೆಲೆ, ಅನ್ವಯಿಕತೆಗೆ ಹೆಚ್ಚಿನ ಒತ್ತುಕೊಟ್ಟಿವೆ. ಕೃಷಿ ಮತ್ತು ಕೃಷಿ ಸಂಬಂಧಿತ ಪೂರಕ ಬೇಸಾಯ ಕ್ರಮಗಳತ್ತ ಬೆಳಕು ಚೆಲ್ಲುತ್ತಾ ಸಾಗಿರುವುದನ್ನು ಈ ಮೇಲಿನ ಕೃತಿಗಳು ಬಿಂಬಿಸುತ್ತವೆ.

**ಸ್ವಾತಂತ್ರ್ಯೋತ್ತರ ಕಾಲಘಟ್ಟದ ಕೃಷಿ ವಿಜ್ಞಾನ ಸಾಹಿತ್ಯ:**

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿನ ಕೃಷಿ ವಿಜ್ಞಾನ ಸಾಹಿತ್ಯದಲ್ಲಾದ ರಚನಾ ಸ್ವರೂಪ ವಿಭಿನ್ನತೆಯತ್ತ ಹೊರಳಿತು. ಹಸಿರು ಕ್ರಾಂತಿಯ ಪರಿಣಾಮದಿಂದಾಗಿ ಕೃಷಿಯಲ್ಲಿನ ನೂತನ ತಂತ್ರಜ್ಞಾನಗಳು, ವಿಸ್ತರಣಾ ಪದ್ಧತಿಗಳು, ಪಠ್ಯವಿಷಯಗಳು, ಸಂಶೋಧನೆಗಳು ಮುಂತಾದವುಗಳ ಬೆಳವಣಿಗೆಯಿಂದ ಹೊಸ ಬಗೆಯ ಸಾಹಿತ್ಯ ನಿರ್ಮಾಣಕ್ಕೆ ನಾಂದಿಯಾಯಿತು. ಶುದ್ಧ ವೈಜ್ಞಾನಿಕ ಕೃಷಿ ಸಾಹಿತ್ಯದತ್ತ ಹೊರಳಿತು. ಇಲ್ಲಿ ಸ್ವತಃ ಕೃಷಿ ವಿಜ್ಞಾನದ ಅಧ್ಯಯನ ಕೈಗೊಂಡ ವಿಜ್ಞಾನಿಗಳು, ಲೇಖಕರು, ಹವ್ಯಾಸಿ ಬರಹಗಾರರು, ಪತ್ರಕರ್ತರು, ಆಸಕ್ತರ ಕೊಡುಗೆ ಕಂಡುಬರುತ್ತದೆ. ಮಣ್ಣು, ನೀರು, ಸಸ್ಯರೋಗ, ಜಲಾನಯನ ಅಭಿವೃದ್ಧಿ, ಜೈವಿಕ ತಂತ್ರಜ್ಞಾನ, ವಿಸ್ತರಣೆ, ಅಂಗಾಂಶ

ಕೃಷಿ, ಬೌದ್ಧಿಕ ಆಸ್ತಿಹಕ್ಕು, ಸಂಶೋಧನೆ, ಬೋಧನೆ ಕೃಷಿ ಜಾಗತೀಕರಣ ಹಾಗೂ ಉದಾರೀಕರಣಕ್ಕೆ ಒಳಗಾದ ವಿಷಯಗಳ ಕೃತಿಗಳು ಹೆಚ್ಚಾಗಿ ಪ್ರಕಟಗೊಳ್ಳತೊಡಗಿದವು.

ಪಾಶ್ಚಿಮಾತ್ಯ ದೇಶಗಳ ಹೊಸ ತಂತ್ರಜ್ಞಾನಗಳ ಪರಿಚಯ, ಅದಕ್ಕೆ ತೆರೆದುಕೊಂಡ ಭಾರತದ ಜನತೆ, ಅದುವರೆಗಿದ್ದ ಸಾಂಪ್ರಾದಾಯಕ ಕೃಷಿ ಪದ್ಧತಿಯಿಂದ ಆಧುನಿಕ ಕೃಷಿಪದ್ಧತಿಯತ್ತ ಕೃಷಿಕ ಹೊರಳಿದ ಬಗೆ, ಆಧುನಿಕ ಕೃಷಿ ವಿಜ್ಞಾನದ ಅವಿಚ್ಛಿನ್ನ ಬೆಳವಣಿಗೆಗೆ ಪೂರಕವಾಯಿತು. ಹಸಿರು ಕ್ರಾಂತಿಯ ನಂತರ ಆಧುನಿಕ ಕೃಷಿ ಪದ್ಧತಿಯ ಪರಿಚಯ, ಕೃಷಿಯಲ್ಲಿನ ನೂತನ ಆವಿಷ್ಕಾರಗಳನ್ನು ಪರಿಚಯಿಸುವಂತಹ ಗ್ರಂಥಗಳು ಹೆಚ್ಚಾಗಿ ಪ್ರಕಟಗೊಂಡಿವೆ.

ಇದೇ ಕಾಲಕ್ಕೆ ಎರಡನೇ ಮಹಾಯುದ್ಧದ ಬಳಿಕ ಭಾರತ ತೀವ್ರವಾದ ಆಹಾರ ಕೊರತೆಯನ್ನು ಎದುರಿಸಬೇಕಾಯಿತು. ಆಹಾರ ಪೂರೈಕೆಗಾಗಿ ಅಮೆರಿಕಕ್ಕೆ ಕೈಚಾಚಬೇಕಾಯಿತು. ಆವರೆಗೆ ಆಹಾರದಲ್ಲಿ ಸ್ವಾವಲಂಬಿಯಾಗಿದ್ದ ದೇಶ ಬೇರೆ ದೇಶದತ್ತ ಕೈಯೊಡ್ಡುವ ಪರಿಸ್ಥಿತಿಯನ್ನು ತಪ್ಪಿಸಲು ನಮ್ಮ ದೇಶದಲ್ಲಿ ಕೃಷಿಯ ಆಧುನಿಕ ಪ್ರಯೋಗಗಳು ಶುರುವಾದವು. ಫಲಿತವಾಗಿ ಭಾರತದಲ್ಲಿ 'ಹಸಿರು ಕ್ರಾಂತಿ' ಹೆಸರಿನಲ್ಲಿ ಆಧುನಿಕ ಕೃಷಿ ವಿಜ್ಞಾನ ಪ್ರಾಮುಖ್ಯತೆ ಪಡೆಯಿತು. ಅಧಿಕ ಆಹಾರ ಉತ್ಪಾದನೆ ಕೃಷಿ ಯಂತ್ರೋಪಕರಣಗಳ ಬಳಕೆ, ನೀರಾವರಿಗಾಗಿ ಅಣೆಕಟ್ಟು ನಿರ್ಮಾಣ, ರಸಗೊಬ್ಬರ ಬಳಕೆ ಮುಂತಾದ ಅಮೂಲಾಗ್ರ ಬೆಳವಣಿಗೆಗಳಾದವು. ದೇಶದ ಹಲವು ಭಾಗಗಳಲ್ಲಿ ಕೃಷಿ ವಿಷಯದ ಅಧ್ಯಯನಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯಗಳು ಸ್ಥಾಪನೆಗೊಂಡವು. ಕರ್ನಾಟಕದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಿ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾದವು.

ಇಲ್ಲಿನ ಬಹುತೇಕ ಲೇಖಕರು ಶುದ್ಧ ಕೃಷಿ ವಿಜ್ಞಾನ ಸಾಹಿತ್ಯದ ರಚನೆಗೆ ತೊಡಗಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಲ್ಲದೇ ಇವರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವವರು, ಸಂಶೋಧಕರು, ವಿಜ್ಞಾನಿಗಳು ಹಾಗೂ ಕೃಷಿಯಲ್ಲಿನ ಆಸಕ್ತಿಹೊಂದಿದ ಹವ್ಯಾಸಿ ಬರಹಗಾರರು ಹೆಚ್ಚಿನದಾಗಿ ಕೃಷಿ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ಗಮನಾರ್ಹ. ಇವರು ಕೃಷಿಗೆ ಸಂಬಂಧಿತ ಪಠ್ಯಪುಸ್ತಕ ಹಾಗೂ ಪಠ್ಯಪೂರಕ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ.

ಸ್ವಾತಂತ್ರ್ಯೋತ್ತರ ಭಾರತದ ಆರಂಭದ ದಿನಗಳು ಆಹಾರಾಭಾವವನ್ನು ಎದುರಿಸುತ್ತಿದ್ದ ಪ್ರಾಯೋಗಿಕ ನೆಲೆಯ ಕಾಲಘಟ್ಟವೆಂದೇ ಗುರುತಿಸಿಕೊಂಡಿದೆ. 50–60ರ ದಶಕದಲ್ಲಿ ರಚಿತಗೊಂಡ ವೀ. ಚ ಹಿತ್ತಲಮನಿ ಅವರ 'ಗೊಬ್ಬರ', ಸಿದ್ಧವನಹಳ್ಳಿ ಕೃಷ್ಣಶರ್ಮರ 'ಕಾಮಧೇನು', ಎಲ್. ದೇಸಿಗೌಡರ 'ರೇಷ್ಮೆ ಕೈಗಾರಿಕೆ, ಎಸ್. ಎಸ್. ಕಟಗಿಹಳ್ಳಿ ಮಠರ 'ಕೀಟ ಪಿಡುಗುಗಳ ಸಮೀಕ್ಷಣೆ', ಕೊರಪಠು ಗುಂಡಪ್ಪರ

‘ವ್ಯವಸಾಯ ಮಣ್ಣುಗಳು’, ಡಿ. ಎಸ್. ಮುರಿಗೆಪ್ಪ ಶ್ರೇಷ್ಠಿಗಳ ‘ಜೇನು’, ನರಸಿಂಹ ಅಯ್ಯಂಗಾರ್ ಅವರ ‘ಮೈಸೂರಿನ ವ್ಯವಸಾಯ’, ಎಲ್. ನರಸಿಂಹಮೂರ್ತಿ ಅವರ ‘ರೇಷ್ಮೆ, ಜೆ. ಮುನಿಯಪ್ಪರ ‘ಕುರಿಸಾಕಣೆ’, ಕಪನೀಪತಿಭಟ್ಟ ಅವರ ‘ನೀರಾವರಿ’, ಎಂ. ಎಂ. ಹೊಸಮನಿಯವರ ‘ಬೆಳವಲ ನಾಡಿನ ಬೆಳೆಗಳು’ ಹಾಗೂ ಎಂ. ಎಲ್. ನರಸಿಂಹ ಅಯ್ಯಂಗಾರ್ ಅವರ ‘ವನಮಾಲಿ’ ಕೃತಿಗಳನ್ನು ಪ್ರಾತಿನಿಧಿಕವಾಗಿ ಗುರುತಿಸಬಹುದು. ಇಲ್ಲಿ ಬಹುತೇಕ ಕೃತಿಗಳು ಪ್ರಾಯೋಗಿಕ ನೆಲೆಯಲ್ಲಿ ರಚಿತಗೊಂಡಿವೆ.

**60ರ ದಶಕದ ನಂತರದ ಕೃಷಿ ವಿಜ್ಞಾನ ಸಾಹಿತ್ಯ:**

ಜನಪ್ರಿಯ ವಿಜ್ಞಾನ ಸಾಹಿತ್ಯ ನಿರ್ಮಾಣದಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕೊಡುಗೆ ಅಪಾರವಾದುದು. ಈ ಸಂಘದ ಮೂಲಕ 1916ರಲ್ಲಿ ಪ್ರಬುದ್ಧಕರ್ನಾಟಕ ಪತ್ರಿಕೆ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚನೆಗಾಗಿ ಆರಂಭಿಸಿದುದು ವಿಜ್ಞಾನ ಸಾಹಿತ್ಯದ ಮಹತ್ವದ ಮೈಲಿಗಲ್ಲಾಯಿತು. ಮಾಸಪತ್ರಿಕೆಯಾಗಿದ್ದ ಪ್ರಬುದ್ಧಕರ್ನಾಟಕವು ತನ್ನ ಚಿನ್ನದ ಹಬ್ಬವನ್ನಾಚರಿಸಿಕೊಳ್ಳುವ ಸಂದರ್ಭದಲ್ಲಿ ಚಿನ್ನದ ಸಂಚಿಕೆಯನ್ನು ಪ್ರಕಟಿಸಿತು.

ಇದೇ ಕಾಲಕ್ಕೆ ದೇಶದಲ್ಲಿ ಹಸಿರು ಕ್ರಾಂತಿಯ ಮೂಲಕ ಅಧಿಕ ಆಹಾರ ಉತ್ಪಾದನೆ, ಹೈಬ್ರಿಡ್ ತಳಿಗಳು, ಸಸ್ಯ ಸಂರಕ್ಷಣೆ, ಕೃಷಿ ತಂತ್ರಜ್ಞಾನಗಳ ಪರಿಚಯ, ಮಿಶ್ರತಳಿಗಳು, ತಳಿ ಸಂಕರಣ ಹಾಗೂ ಗೋದಿ, ಬತ್ತ, ರಾಗಿ ಕೃಷಿಯ ಪ್ರಧಾನ ಬೆಳೆಗಳಲ್ಲಿ ಆದ ಬದಲಾವಣೆಗಳ ಕುರಿತ ಕೃತಿಗಳು ಹೆಚ್ಚು ಪ್ರಕಟಗೊಂಡಿರುವುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ಇದೇ ಹೊತ್ತಿನಲ್ಲಿ ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯು ಸಹ ಅಧ್ಯಯನ ಶಿಸ್ತಿಗೆ ಒಳಪಟ್ಟಿತು. ವಯಸ್ಕರ ಶಿಕ್ಷಣ ಸಮಿತಿ, ಸಾಂಪ್ರಾದಾಯಿಕ ವಿಶ್ವವಿದ್ಯಾಲಯಗಳಾದ ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲಿಕೆ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥ ಮಾಲೆ, ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳು ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳು ಕನ್ನಡದಲ್ಲಿ ಕೃಷಿ ಸಾಹಿತ್ಯ ರಚನೆಯಲ್ಲಿ ತೊಡಗಿದವು.

ಕಲ್ಯಾಣಿ ಮಠರ ‘ಅಧಿಕ ಉತ್ಪಾದನೆಗಾಗಿ ಬೆಳೆಗಳು ಮಿಶ್ರತಳಿ’, ವಿಜಯೇಂದ್ರ ಮೂರ್ತಿಯವರ ‘ತೆಂಗು’, ಕೃಷ್ಣ ಗೌಡರ ‘ಕ್ಯಾವೆಂಡಿಶ್ ಬಾಳೆ’, ವಿ. ಸಿ. ಹಿತ್ತಲಮನಿಯವರ ‘ಮೈಸೂರು ರಾಜ್ಯದಲ್ಲಿ ಕೃಷಿ’, ಎಂ. ಚಿನ್ನಸ್ವಾಮಿ ರೆಡ್ಡಿಯವರ ‘ಸಸ್ಯ ಸಂರಕ್ಷಣೆ’, ಪಿ. ಹನುಮಂತಪ್ಪ ಅವರ ‘ಮೆಕ್ಸಿಕನ್ ಗೋದಿ’, ಎಂ. ಸಿ. ಕೊಡ್ಲಿಗೆಯವರ ‘ನಮ್ಮ ರೈತರೇಕೆ ಹಿಂದುಳಿದಿದ್ದಾರೆ’, ಡಿ. ಶೇಷಗಿರಿರಾವ್ ಅವರ ಸಸ್ಯ

ಸಂರಕ್ಷಣೆ ಕೈಪಿಡಿ', ಮೈಸೂರು ವಿಶ್ವವಿದ್ಯಾಲಯದಲ್ಲಿ ಕುವೆಂಪು ಅವರು ಸಂಪಾದಿಸಿರುವ 'ವ್ಯವಸಾಯ ಕೈಪಿಡಿ', ಜಿ. ವಿ. ಬಿ. ನಾಯ್ಡು ಅವರ 'ವ್ಯವಸಾಯ ಮುನ್ನಡೆ', ಜಿ. ವಿರೇಶ್‌ರವರ 'ಆಧುನಿಕ ಬೇಸಾಯ', ಜಿ. ಡಿ. ಕಿತ್ತೂರ ಅವರ ಸಂಕರಣ ಜೋಳ', ಎಸ್. ಎನ್. ಚೌಧುರಿಯವರ 'ರೇಷ್ಮೆಹುಳು ಮತ್ತು ಅದರ ಸಾಕಣೆ' ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ 'ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು' ಕೃತಿಗಳನ್ನು ಪ್ರಮುಖವಾಗಿ ಗುರುತಿಸಬಹುದು.

ರೈತರನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಹಲವು ಪ್ರಾಯೋಗಿಕ ಕೃತಿಗಳನ್ನು ಪ್ರಕಟಿಸುವ ಮೂಲಕ ಆಧುನಿಕ ಕೃಷಿ ವಿಜ್ಞಾನ ಪರಿಚಯಿಸಿರುವುದು ಗಮನಾರ್ಹ. ಅವುಗಳಲ್ಲಿ ಜಿ. ಡಿ. ಕಿತ್ತೂರ್ ಅವರ 'ಸಂಕರಣ ಜೋಳ', ಎಂ. ಕೃಷ್ಣಶಾಸ್ತ್ರಿ ಯವರ 'ಪಶುಪಾಲನೆ, ಪಿ. ಹನುಮಂತಪ್ಪರ 'ಮೆಕ್ಸಿಕನ್ ಗೋದಿ', ಬಿ. ಎಂ. ವಾಮದೇವಯ್ಯರ 'ಕಾಳಿನ ಉಳಿಕೆ–ರೈತರ ಗಳಿಕೆ', ವಿಜಯೇಂದ್ರ ಮೂರ್ತಿಯವರ 'ಬೆಳೆ ತಂದ ಭಾಗ್ಯ', ಆರ್. ಬಿ. ವೆಂಕಟಸುಬ್ಬಯ್ಯರ 'ಹಸುರು ಮೇವಿನ ಕಣಜ', ಬಿ. ವೈ. ಗುರುಮೂರ್ತಿಯವರ 'ಕಸಿ ಮತ್ತು ಗೂಟಿ' ಹಾಗೂ ಎಸ್. ಎಲ್. ರಂಗರಾಜು ಅವರ 'ಹೊಸಬಿತ್ತನೆ–ಅಧಿಕ ಲಾಭ ಪೂರ್ಣರಾಗಿ' ಎಂಬ ಜನಪ್ರಿಯ ಮಾಲಿಕೆಗಳು ರೈತರ ಮನ ಮುಟ್ಟುವಲ್ಲಿ ಯಶಸ್ವಿಯಾದ ಪ್ರಮುಖ ಕೃತಿಗಳು.

**70ರ ದಶಕದ ನಂತರ ಕೃಷಿ ವಿಜ್ಞಾನ ಸಾಹಿತ್ಯ:**

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಗೊದ್ದು ವೀರೇಶ್ ಅವರ 'ಆಧುನಿಕ ವ್ಯವಸಾಯ' ಪುಸ್ತಕವನ್ನು 1971ರಲ್ಲಿ ಪ್ರಕಟಿಸಿದೆ. ಇದೇ ಪರಿಷತ್ತಿನ ಸುವರ್ಣಮಹೋತ್ಸವದ ಸವಿನೆನಪಿನ ಚಿನ್ನದ ಬೆಳಸು ಸಂಪುಟದಲ್ಲಿ ಜೆ. ಆರ್. ಲಕ್ಷ್ಮಣರಾವ್ ಅವರ 'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ' ಪ್ರಕಟವಾಗಿದೆ. ಶಾ. ಬಾಲುರಾವ್ ಅವರ ಜೇನವ್ವನ ಸಂಸಾರ ಕೃತಿಯನ್ನು 1973ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ಕನ್ನಡ ಸಾಹಿತ್ಯದಲ್ಲಿ ಅದ್ವೀತಿಯ ಹೆಸರಾಗಿದ್ದ ಬಿ. ಜಿ. ಎಲ್ ಸ್ವಾಮಿಯವರು ಹಸುರು ಹೊನ್ನು, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕದಂತಹ ಮಹತ್ವದ ಕೃತಿಗಳನ್ನು ನೀಡಿದರು. ವೈಜ್ಞಾನಿಕ ಸಸ್ಯಗಳ ಪರಿಚಯ, ಹುಟ್ಟಿನ ಮೂಲ ಮುಂತಾದ ವಿವರಗಳನ್ನು ಕನ್ನಡಿಗರ ಮನಮುಟ್ಟುವಂತೆ ರಚಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ರೈತರಿಗಾಗಿಯೇ ಕುವೆಂಪು ಅವರು ಪ್ರಧಾನ ಸಂಪಾದಕತ್ವದಲ್ಲಿ 'ವ್ಯವಸಾಯ ಕೈಪಿಡಿ' ಎಂಬ ಬೃಹತ್ತಾದ ಗ್ರಂಥ 1972ರಲ್ಲಿ ಪ್ರಕಟವಾಗಿದೆ. ವೀ. ಚ. ಹಿತ್ತಲಮನಿಯವರು ಸಂಪಾದಿಸಿದ ಮೈಸೂರು ರಾಜ್ಯದಲ್ಲಿ ಕೃಷಿ ಒಂದು ಮಹತ್ವದ ಕೃತಿ. ಎಚ್. ಕೆ. ಮಲ್ಲಿಕಾರ್ಜುನಪ್ಪ ಅವರ

‘ಸಸ್ಯಗಳ ನಿಘಂಟು’, ಡಿ. ರಂಗಯ್ಯ ಅವರ ‘ಪ್ರಾಚೀನ ಸಸ್ಯವಿಜ್ಞಾನ’, ಡಿ. ವೆಂಕಟರಾವ್ ಅವರ ‘ಕೃಷಿ ಸಹಕಾರ’, ಡಿ. ಶೇಷಗಿರಿರಾವ್ ಅವರ ‘ಸಸ್ಯ ಸಂರಕ್ಷಣೆ–ಕೈಪಿಡಿ’ ಕೃತಿಗಳು ಮೈ. ವಿ. ವಿ., ಪ್ರಸಾರಾಂಗದಿಂದ ಪ್ರಕಟವಾಗಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯವತಿಯಿಂದ ಹಾ. ಮಾ. ನಾಯಕ ಅವರ ಪ್ರಧಾನ ಸಂಪಾದಕತ್ವದಲ್ಲಿ 'ವಿಜ್ಞಾನ ಸಾಹಿತ್ಯ ನಿರ್ಮಾಣ' ಮತ್ತು 'ಶಾಸ್ತ್ರ ಸಾಹಿತ್ಯ ನಿರ್ಮಾಣ' ಕೃತಿಗಳು ಪ್ರಕಟವಾಗಿವೆ. ಕನ್ನಡ ಅಧ್ಯಯನ ಸಂಸ್ಥೆಯವತಿಯಿಂದ ಪಿ. ಎಲ್. ಪದ್ಮಾವತಿ ಮತ್ತು ಜಿ. ರೇವಣಸಿದ್ಧಪ್ಪ ಅವರ 'ಸಸ್ಯ ವರ್ಗೀಕರಣ ಶಾಸ್ತ್ರ' ಕೃತಿಯೂ ಪ್ರಕಟವಾಗಿದೆ. ಇವುಗಳಲ್ಲದೆ ನರಸಿಂಹ ಅಯ್ಯಂಗಾರ್ ಮತ್ತು ಆನಂದರಾಮಯ್ಯ ಅವರ 'ತೋಟಗಾರಿಕೆ', ಅಯ್ಯಂಗಾರ್‌ರವರ 'ನಮ್ಮ ದನಗಳು', ಎಲ್. ನರಸಿಂಹಮೂರ್ತಿಯವರ 'ರೇಷ್ಮೆ', ನರಹರಿರಾವ್‌ಮತ್ತು ಬಿ. ಎ. ಸತ್ಯನಾರಾಯಣರಾವ್ ಅವರ ‘ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆ’, ಎಸ್. ಎನ್. ರಾಮಸ್ವಾಮಿ ಅವರ 'ಕರ್ನಾಟಕದ ಅರಣ್ಯದ ವೃಕ್ಷಗಳು’ ಎಸ್. ವರದರಾಜನ್‌ರ ವಿಜ್ಞಾನ ಸಂಶೋಧನೆ, ಇನ್ನೂ ಹಲವಾರು ಕೃತಿಗಳು ಪ್ರಕಟಗೊಂಡಿವೆ.

ಅಂತೆಯೇ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯಲ್ಲಿ ಬಿ. ಆರ್. ಪಾಟೀಲರ 'ಹಳ್ಳಿಗರೇಳ್ಗೆ ಸಾಧಿಸುವ ಬಗೆ', ಎಸ್. ಎಸ್. ಕಟಗಿಹಳ್ಳಿ ಮಠ ಅವರು ಕೀಟಕ ಪಿಡುಗುಗಳ ಸಮೀಕ್ಷಣೆ, ಎ. ಸಿ. ಕಲ್ಯಾಣಿಮಠರ ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು, ಎಸ್. ಕೆ. ಕಲ್ಲಾಪುರಅವರ ಕಸದಿಂದ ರಸೋತ್ಪತ್ತಿ, ಟಿ. ಎಂ. ಪಂಡಿತರ ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು, ಎಂ. ಎಂ. ಹೊಸಮನಿಯವರ 'ಭೂ ಸಂರಕ್ಷಣೆ ಮತ್ತು ಒಣಬೇಸಾಯ' ಇನ್ನೂ ಹಲವಾರು ಕೃತಿಗಳು ಪ್ರಕಟಗೊಂಡಿವೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗವು ತನ್ನ ಪ್ರಚಾರೋಪನ್ಯಾಸಮಾಲೆಯಲ್ಲಿ ಕೆ. ಎನ್. ಶಿವಶಂಕರರಾವ್ ಅವರ ನೀರಾವರಿ ಸಮಸ್ಯೆಗಳು ಎನ್ನುವ ಕೃತಿಯನ್ನು ಪ್ರಕಟಿಸಿದೆ. ಅಲ್ಲದೆ ಇನ್ನೂ ಹಲವಾರು ಪುಸ್ತಕಗಳನ್ನು ಪ್ರಕಟಿಸಿದೆ.

ಭಾರತ ಸರ್ಕಾರ ಪ್ರಾದೇಶಿಕ ಭಾಷೆಗಳಿಗೆ ಹೆಚ್ಚಿನ ಆದ್ಯತೆ ನೀಡಿ ಹಿಂದಿ ಹಾಗೂ ಇತರ ರಾಜ್ಯಗಳ ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯ ರಚನೆ ಮಾಡುವಂತೆ ಸಂಸತ್ತಿನಲ್ಲಿ ಒಂದು ಮಸೂದೆಯನ್ನು ಮಂಡಿಸಿತು. ಈ ಮಸೂದೆ ಕಾನೂನು ರೂಪ ಪಡೆದು ಕೇಂದ್ರೀಯ ಮಾನವ ಸಂಪನ್ಮೂಲ ಇಲಾಖೆಯು ‘ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಶಬ್ದಾವಳಿ ಆಯೋಗ’ವನ್ನು ರಚಿಸಿತು. ಇದು ಪ್ರಾದೇಶಿಕ ಭಾಷೆಗಳಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಗೆ ಹಣಕಾಸು ನೆರವು,

ತರಬೇತಿ, ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತೊಡಗಿತು. ಇಂದಿಗೂ ಸಹ ತನ್ನದೇ ಆದ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಲಿದೆ.

70ರ ದಶಕದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ವಿಭಾಗ ಆರಂಭವಾಗಿ ಇಲ್ಲಿಯವರೆಗೂ, ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಾ ಬಂದಿದೆ. ಇದುವರೆಗೆ ಪಠ್ಯಪುಸ್ತಕ, ಪಠ್ಯ ಪೂರಕ ಕೃತಿ ಮತ್ತು ಕೃಷಿ ಜ್ಞಾನ ಭಂಡಾರ ಮಾಲಿಕೆ ಹಾಗೂ ಕನ್ನಡ ಭಾಷಾ ಯೋಜನೆ ಮಾಲಿಕೆಯಲ್ಲಿ 450ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿರುವುದು ಒಂದು ದಾಖಲೆ. ಕೃಷಿ ವಿಜ್ಞಾನ ಗ್ರಂಥಗಳ ಸಂಪಾದನೆಯಲ್ಲಿ ವೀ. ಚ. ಹಿತ್ತಲಮನಿ, ಡಾ. ಎಚ್. ಕೆ. ನರಸಿಂಹೇಗೌಡ, ಡಾ. ಬಿ. ಎಸ್. ಸಿದ್ದರಾಮಯ್ಯ, ಸಿ. ಕೆ. ಕುಮುದಿನಿ, ಡಾ. ಉಷಾಕಿರಣ್ ಮತ್ತು ಡಾ. ಜೆ. ಬಾಲಕೃಷ್ಣ ಮುಂತಾದವರ ಪರಿಶ್ರಮವನ್ನು ಗುರುತಿಸಲೇಬೇಕು. ಇಲ್ಲಿನ ಗ್ರಂಥಗಳಲ್ಲಿ ಹಲವು ಅನುವಾದಿತ, ಸ್ವರಚಿತ, ಸಂಶೋಧನೆ, ಜನಪ್ರಿಯ ಕೃಷಿ ಸಾಹಿತ್ಯವನ್ನು ಒಳಗೊಂಡಿರುವುದು ವಿಶೇಷ.

**90ರ ದಶಕದ ನಂತರದ ಇತ್ತೀಚಿನ ಕೃಷಿ ವಿಜ್ಞಾನ ಸಾಹಿತ್ಯ:**

ಕೃಷಿಕ ಪರಿಸರ ಮಾಲಿನ್ಯ, ಬಹುರಾಷ್ಟ್ರೀಯ ಸಂಸ್ಥೆಗಳ ಮೇಲಿನ ಅವಲಂಬನೆ, ಪೇಟೆಂಟ್ ಮತ್ತು ಬೌದ್ಧಿಕ ಆಸ್ತಿಹಕ್ಕು, ರೈತ ವಿರೋಧಿನೀತಿ ಮುಂತಾದ ಸಮಸ್ಯೆಗಳಿಗೆ ತೆರೆದುಕೊಂಡ ಕಾಲವಾಗಿದೆ. ಕೃಷಿ ಮಾರುಕಟ್ಟೆಯ ಕುಸಿತ, ಕೃಷಿ ವಾಣಿಜ್ಯೀಕರಣದಿಂದ ಏಕ ಬೆಳೆ ಪದ್ಧತಿ ಅನುಸರಣೆ, ಸಣ್ಣ ಸಣ್ಣ ಭೂಹಿಡುವಳಿಗಳಿಂದ ಉತ್ಪಾದನೆಯಲ್ಲಿ ಇಳಿಕೆ ಮುಂತಾದ ಪರಿಣಾಮಗಳನ್ನು ಕೃಷಿಕ ಎದುರಿಸುವಂತಾಗಿದೆ. ಕೃಷಿಯನ್ನು ಒಂದು ಲಾಭದಾಯಕ ವೃತ್ತಿಯೆಂಬ ಭಾವನೆ ಎಲ್ಲೆಡೆ ಮೂಡಿ, ಆ ನಿಟ್ಟಿನಲ್ಲಿ ಉತ್ಪಾದನೆಯಲ್ಲಿ ತೊಡಗಿರುವುದು. ಕುಲಾಂತರಿ ತಳಿ, ರೋಗ ನಿರೋಧಕ ತಳಿಗಳ ಬಳಕೆ, ಅಂಗಾಂಶ ಕೃಷಿ, ಕೃಷಿ ರಾಸಾಯನಿಕ ಪರಿಕರಗಳ ಬೆಲೆ ಹೆಚ್ಚಳ, ಕೃಷಿಯಲ್ಲಿ ನ್ಯಾನೋ ತಂತ್ರಜ್ಞಾನದ ಅಳವಡಿಕೆ ಮುಂತಾದ ಆಧುನಿಕ ವಿಧಾನಗಳು ಬಹುಸಂಖ್ಯಾತ ಸಣ್ಣ ಮತ್ತು ಮಧ್ಯಮ ಕೃಷಿಕರಿಗೆ ಎಟುಕದಂತಾಗಿದೆ.

ಈ ಹಿನ್ನೆಲೆಯಲ್ಲಿ ಜಾಗತೀಕರಣದತ್ತ ವಾಲಿದ ಕೃಷಿ ಮತ್ತು ಕೃಷಿಕನ ಕುರಿತಾಗಿ ಹಲವು ಬಗೆಯ ಹೊಸ ಚಿಂತನೆಗಳು ಹುಟ್ಟಿಕೊಂಡವು. ವಾಣಿಜ್ಯ ಬೆಳೆ, ಏಕ ಬೆಳೆ ಉತ್ಪಾದನೆಗೆ, ಅತ್ಯಧಿಕ ರಾಸಾಯನಿಕ ಬಳಕೆಯ ಪರಿಣಾಮ, ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಪರಿಗಣಿಸಿದ ಪರಿಣಾಮವಾಗಿ ಸಂಕ್ರಮಣಾವಸ್ಥೆಯಲ್ಲಿ ತೊಳಲಾಡುತ್ತಿರುವ ಕೃಷಿಕರನ್ನು ಇಂದು ಕಾಣಬಹುದು. ರೈತರ ಆತ್ಮಹತ್ಯೆ, ಕುಲಾಂತರಿ ತಳಿಗಳು, ವಿದೇಶಿ ಕಂಪನಿಗಳ ಪ್ರಭಾವ, ಬಿ. ಟಿ. ಹತ್ತಿ, ಬಿ. ಟಿ. ಬದನೆ, ಮಾನ್ಸಾಂಟೊ,

ಸಿಬಾ, ಕಾರ್ಗಿಲ್ ಮುಂತಾದ ವಿಷಯಗಳ ಕುರಿತು ಕೃಷಿಕರಿಗೆ ಹೊಸಬಗೆಯ ಆಲೋಚನೆಗಳನ್ನು ನೀಡಲು ಚಿಂತಕರು ಕೃತಿಗಳನ್ನು ರಚಿಸತೊಡಗಿದರು.

ಸರ್ಕಾರದ ಅಂಗ ಸಂಸ್ಥೆಯಾದ ಕನ್ನಡ ಪುಸ್ತಕ ಪ್ರಾಧಿಕಾರವು 2006ರಲ್ಲಿ ದೇಸಿ ಕೃಷಿ ಕಮ್ಮಟ ನಡೆಸಿ ದೇಸಿ ಕೃಷಿ ಜ್ಞಾನವನ್ನು ದಾಖಲಿಸುವ ಕಾರ್ಯಕ್ಕೆ ಯತ್ನಿಸಿತು. ಇದೀಗ ದೇಸಿ ಕೃಷಿ ಜ್ಞಾನ ಮಾಲಿಕೆಯಲ್ಲಿ 11 ಪುಸ್ತಕಗಳನ್ನು ಪ್ರಕಟಿಸಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕೃಷಿ ಸಂಬಂಧಿತ ಹಲವು ಸಂಶೋಧನೆಗಳನ್ನು ನಡೆಸಿದೆ. ಇಲ್ಲಿ ಕೃಷಿ ಪದಕೋಶ, ಉರಿದಾವೋ ನೇಗಿಲು, ಅಭಿವೃದ್ಧಿಪಥ ಇತ್ಯಾದಿ ಕೃತಿಗಳನ್ನು ಕಾಣಬಹುದು. ಬೆಂಗಳೂರಿನ ಕೃಷಿ ವಿಕಾಸ ಪಬ್ಲಿಕೇಷನ್ 100ಕ್ಕೂ ಹೆಚ್ಚು ಕೃಷಿ ಪುಸ್ತಕಗಳನ್ನು ಪ್ರಕಟಿಸಿದೆ. ನವಕರ್ನಾಟಕ ಪ್ರಕಾಶನ, ಸ್ವಪ್ನ ಬುಕ್ ಹೌಸ್‌ನಂತಹ ಖಾಸಗಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಕೃಷಿ ವಿಜ್ಞಾನ ಸಾಹಿತ್ಯದ ಪ್ರಕಟಣೆಯಲ್ಲಿ ತೊಡಗಿವೆ.

ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ವಿಧಾನಗಳ ಕುರಿತ ಬರವಣಿಗೆ, ರೈತರ ಅನುಭವಕ್ಕೆ ಆದ್ಯತೆ, ಸಾವಯವ ಕೃಷಿ ಕುರಿತ ಬರವಣಿಗೆಗಳು ಮತ್ತು ಸಾಹಿತ್ಯ ಪ್ರಕಟಣೆಗಳು ಹೆಚ್ಚು ಪ್ರಕಟಗೊಂಡಿವೆ. ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಉಪಸಮಿತಿಯು ಪ್ರಕಟಿಸಿರುವ ಡಾ. ಎಂ. ಜಿ. ನಾಗರಾಜ್ ಅವರ 'ರೈತ ಸತ್ಯಾಗ್ರಹಗಳು ಸಹಸ್ರಮಾನ 1–6–ಸಂಪುಟಗಳು' ಸಂಶೋಧಕರಿಗೆ ಆಕರ ಗ್ರಂಥಗಳಾಗಿವೆ. ವೀರಭದ್ರಪ್ಪ ಬಿಸ್ಲಳ್ಳಿ ಅವರ 'ಕೃಷಿ ಕ್ಷೇತ್ರದ ಹೊಸ ಸಂಕಟಗಳು', ಡಾ. ಎನ್. ಜಗದೀಶ್ ಕೊಪ್ಪ ಅವರ 'ಜಾಗತೀಕರಣ ಮತ್ತು ಗ್ರಾಮ ಭಾರತ' ಇನ್ನೂ ಮುಂತಾದ ಕೃತಿಗಳು ಕೃಷಿ ಕ್ಷೇತ್ರದ ಮೇಲೆ ಜಾಗತೀಕರಣದ ಕರಿನೆರಳಿನ ವಿವರವಾದ ಚಿತ್ರಣಗಳನ್ನು ನೀಡುತ್ತವೆ.

ಕೇಂದ್ರ ಸರ್ಕಾರ ಹೊಸ ಕೃಷಿ ನೀತಿ ಜಾರಿಗೊಳಿಸಿ ಕೃಷಿಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಯತ್ನಿಸುತ್ತಿದ್ದು, ಅದರ ಭಾಗವಾಗಿ ಕೃಷಿ ನೀತಿಗಳನ್ನು ಪ್ರಕಟಿಸಿದೆ. ಕರ್ನಾಟಕ ಸರ್ಕಾರವೂ ಸಹ ಕೃಷಿ ಇಲಾಖೆ ಮೂಲಕ ಕೃಷಿಕರಿಗೆ ಸರ್ಕಾರದ ಸವಲತ್ತುಗಳ ಕೈಪಿಡಿ, ಯೋಜನೆ ಹಾಗೂ ಕಾರ್ಯಕ್ರಮಗಳ ವಿವರಗಳ ಪ್ರಕಟಣೆ, ಕಿರುಹೊತ್ತಿಗೆ ಹಾಗೂ ಕೈಪಿಡಿಗಳ ಮೂಲಕ ಕೃಷಿ ಸಾಹಿತ್ಯವನ್ನು ಪ್ರಕಟಿಸುತ್ತಿವೆ. ಕೃಷಿ ಇಲಾಖೆಯು 2001ರಿಂದ ಕೃಷಿಯ ವಿವಿಧ ರಂಗಗಳಲ್ಲಿ ಸಾಧನೆಗೈದ ಸುಮಾರು 300 ಪ್ರಗತಿಪರ ಕೃಷಿಕರಿಗೆ ಕೃಷಿ ಪಂಡಿತ ಪ್ರಶಸ್ತಿ ನೀಡಿ ಅವರ ಸಾಧನೆಯ ವಿವರಗಳನ್ನು ಪ್ರಕಟಿಸಿದೆ. ಆಧುನಿಕ ತಂತ್ರಜ್ಞಾನದ ಮೂಲಕ ತನ್ನ ವೆಬ್‌ಸೈಟ್‌ನಿಂದ ಕೃಷಿ ನೀತಿ, ಯೋಜನೆ, ಕೃಷಿ ಕಾರ್ಯಕ್ರಮಗಳ ವಿವರಗಳನ್ನು ಸಮಗ್ರವಾಗಿ ಸಂಗ್ರಹಿಸಿ ಪ್ರಕಟಿಸಿದೆ. ಕರ್ನಾಟಕ ಸರ್ಕಾರದ ಕೃಷಿ, ತೋಟಗಾರಿಕೆ,

ನೀರಾವರಿ, ಜಲಾನಯನ ಪ್ರದೇಶಾಭಿವೃದ್ಧಿ, ರೇಷ್ಮೆ ಇಲಾಖೆ ಹಾಗೂ ಪಶುಸಂಗೋಪನಾ ಇಲಾಖೆಗಳು, ಕರ್ನಾಟಕ ಕೃಷಿ ಮಿಷನ್, ಸಾವಯವ ಕೃಷಿ ಮಿಷನ್ ಹಾಗೂ ಕೃಷಿ ಪೂರಕ ಅಭಿವೃದ್ಧಿ ಇಲಾಖೆಗಳು ಕೃಷಿ ಸಾಹಿತ್ಯವನ್ನು ಪ್ರಕಟಿಸುತ್ತಿವೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದಿಂದ ಡಾ. ಬಿ. ಶಿವರಾಮಶೆಟ್ಟಿಯವರ 'ಸಸ್ಯಜಾನಪದ' ಕೃತಿಯನ್ನು ಪ್ರಕಟಿಸಿದೆ. ಇಲ್ಲಿ ಕೃಷಿ ಮತ್ತು ರೈತರ ಬಗೆಗಿನ ಹಲವಾರು ಅಧ್ಯಯನ ಮತ್ತು ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ. ಬೆಂಗಳೂರಿನ ಕೃಷಿ ವಿಕಾಸ ಪಬ್ಲಿಕೇಷನ್‌ನವರು "ಪುಷ್ಪಕೃಷಿ, ಕಬ್ಬು ಬೇಸಾಯ, ತರಕಾರಿ ಬೆಳೆಗಳು, ಬಾಳೆ ಬೇಸಾಯ, ಭತ್ತದ ಬೇಸಾಯ, ಟೊಮಾಟೊ ಬೇಸಾಯ, ಬೇಬಿಕಾರ್ನ್, ಅಣಬೇಸಾಯ, ಹಲಸು, ತೊಗರಿ ಬೇಸಾಯ, ಪಪಾಯ ಬೇಸಾಯ, ಸಂಬಾರ ಬೆಳೆಗಳು ಹಾಗೂ ವಿವಿಧ ಬೆಳೆಗಳ" ಕುರಿತಂತೆ ಸುಮಾರು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಬೆಂಗಳೂರಿನ ಕರ್ನಾಟಕ ವಿಜ್ಞಾನ ಪರಿಷತ್ 2005ರಲ್ಲಿ ಕನ್ನಡ ಜನಪ್ರಿಯ ವಿಜ್ಞಾನ ಗ್ರಂಥಗಳ (1888ರಿಂದ 1996ರವರೆಗೆ ಪ್ರಕಟವಾಗಿರುವ) ಸೂಚಿಯಲ್ಲಿ ಕೃಷಿ ಮತ್ತು ಪಶುವೈದ್ಯ ಮತ್ತು ಪಶುಸಂಗೋಪನೆಗೆ ಸಂಬಂಧಿಸಿದಂತೆ 509 ಗ್ರಂಥಗಳನ್ನು ಪಟ್ಟಿ ಮಾಡಿದೆ. ಜೈವಿಕ ವಿಜ್ಞಾನ ಕುರಿತಂತೆ, ಕನ್ನಡ ವಿಜ್ಞಾನ ಸಾಹಿತ್ಯ ಪರಿಷತ್ತು ಪ್ರಕಟಿಸುವ ಬಾಲ ವಿಜ್ಞಾನ, ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ ವಿಜ್ಞಾನ ಸಂಗಾತಿ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಆಕಾಡೆಮಿ ಪ್ರಕಟಿಸುತ್ತಿರುವ ವಿಜ್ಞಾನ ಲೋಕ ವಿಶೇಷವಾಗಿ ಉಲ್ಲೇಖಿಸಬಹುದಾಗಿದೆ.

ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಾದ ಬೆಂಗಳೂರು, ಧಾರವಾಡ, ರಾಯಚೂರು, ಬೀದರ್‌ನ ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾನಿಲಯ, ಶಿವಮೊಗ್ಗೆಯ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಸುಧಾರಿತ ಬೇಸಾಯಪದ್ಧತಿಗಳು, ಕೃಷಿ ವಿಜ್ಞಾನ ಮಾಸಪತ್ರಿಕೆಗಳು, ಕಿರುಹೊತ್ತಿಗೆಗಳು, ಕೃಷಿಮೇಳ, ಕ್ಷೇತ್ರೋತ್ಸವ ಮತ್ತು ಪ್ರಾತ್ಯಕ್ಷಿಕೆಗಳ ಸಂಬಂಧಿತ ಕಿರುಹೊತ್ತಿಗೆಗಳು ಪ್ರಕಟಿಸುವ ಮೂಲಕ ಕೃಷಿ ವಿಜ್ಞಾನ ಸಾಹಿತ್ಯ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

## ಪರಾಮರ್ಶನ ಗ್ರಂಥಗಳು:


1. Randhawa M.S., (1980), A History of Agriculture in India, ICAR, New Delhi.
2. ಹಿತ್ತಲಮನಿ ವೀ.ಸಿ., (1985), ಕೃಷಿ ವಿಜ್ಞಾನ ಕನ್ನಡ ಪುಸ್ತಕಗಳ ಸಮೀಕ್ಷೆ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
3. ಕುಮುದಿನಿ ಸಿ.ಕೆ. (ಅನು), (1987), ಪ್ರಾಚೀನ ಭಾರತದಲ್ಲಿ ಬೇಸಾಯ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
4. Lowie R.H., (1940), An Introduction to cultural Anthropology, George H Harrap and Co, Ltd. London.
5. ದ್ವಾರಕೀನಾಥ್ ಆರ್., (1980), ಶ್ರೀ ಡಿ.ಎಸ್.ಮುರಿಗ್ಯೆಪ್ಪ ಶ್ರೇಷ್ಠಿ, ಕೃಷಿ ಕರ್ನಾಟಕ-ಕೃಷಿ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
6. ಹಿತ್ತಲಮನಿ ವೀ.ಸಿ. (ಸಂ), (1973), ಮೈಸೂರು ರಾಜ್ಯದಲ್ಲಿ ಕೃಷಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
7. ಬಾಲಕೃಷ್ಣ ಜೆ., (2010), ಕೃಷಿ ವಿಜ್ಞಾನ ಸಾಹಿತ್ಯ ನಡೆದು ಬಂದ ಹಾದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ವಿರೇಶ್ ಜಿ.ಕೆ., (2009), ಕೃಷಿ ವಿಜ್ಞಾನದ ಉಗಮ ಮತ್ತು ವಿಕಾಸ, ಸಾವಯವಉತ್ತೇಜನ ಸಂಘ, ಬೆಂಗಳೂರು.
9. ಮುಖ್ಯ ಸಂಶೋಧನಾ ಕೇಂದ್ರ, (2008), ಹೆಬ್ಬಾಳ ಶತಮಾನೋತ್ಸವ ಸಮಾರಂಭ ಸ್ಮರಣ ಸಂಚಿಕೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
10. Gold Track: 1946–1996, (1996), Souvenir of the Golden Jubilee Celebrations of the Agricultural College, Hebbal. Alumni Association. UAS, Hebbal, Bangalore.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.